# ಸ್ಮರಿಸಿ ಬದುಕಿರೊ.....

ಶ್ರೀನಿವಾಸ ಸು.ಮಠದ, ಬಿಜಾಪುರ

ಕಲ್ಲೂರು ಸುಬ್ಬಣ್ಣಾಚಾರ್ಯರು ಶ್ರೀವಿಜಯದಾಸರಿಂದ ಅನುಗ್ರಹ ಪಡೆದು 'ವ್ಯಾಸವಿಠ್ಠಲ' ಎಂಬ ಅಂಕಿತವನ್ನು ಹೊಂದಿ ಗುರುಗಳಾದ ಶ್ರೀವಿಜಯದಾಸರ ಕುರಿತು ಅಪೂರ್ವವಾದ ಅನೇಕ ಅರ್ಥಗರ್ಭಿತವಾದ ಸ್ತೋತ್ರವೊಂದನ್ನು ರಚಿಸಿದರು.ಅದುವೇ 'ಶ್ರೀವಿಜಯಕವಚ'.ಹರಿದಾಸಸಾಹಿತ್ಯಕ್ಕೆ ಶ್ರೀವಿಜಯದಾಸರ ಕೊಡುಗೆ ಅಪಾರ.ಅಷ್ಟೇ ಮಹತ್ವಪೂರ್ಣ ಕೂಡ. ಅವರ ಅನುಗ್ರಹ ಸಂಪಾದಿಸಲು ನಿತ್ಯ 'ವಿಜಯಕವಚ'ದ ಪಾರಾಯಣ ಅತ್ಯವಶ್ಯ. ಅದು ಒಂದು ಮಂತ್ರತುಲ್ಯವಾದ ಸ್ತೋತ್ರ. ಇದರಲ್ಲಿ ಬರುವ ಒಂದೆರಡು ನುಡಿಗಳ ಕುರಿತಂತೆ ವಿಶ್ಲೇಷಣೆ ಇಲ್ಲಿ ಮೂಡಿಬರಲಿದೆ–

## ಗಂಗೆ ಮಿಂದರೆ ಮಲವು ಹಿಂಗಿತಲ್ಲದೇ
## ರಂಗನೊಲಿಯನೋ ಭಕುತರ ಸಂಗ ದೊರೆಯದೇ ॥

ಗಂಗಾನದಿಯಲ್ಲಿ ಸ್ನಾನಮಾಡಿದರೆ ಪಾಪಗಳು ನಾಶವಾಗುತ್ತವೆ. ಭಗವಂತನ ಭಕ್ತರ ಸಂಗ, ಅವರ ಸಹವಾಸ ದೊರೆಯದೇ ಶ್ರೀಹರಿಯು ಒಲಿಯುವುದಿಲ್ಲ ನಿಶ್ಚಿತ.

ಇಲ್ಲಿ ಶ್ರೀವ್ಯಾಸವಿಠಲರು ಒಂದು ಮಾತನ್ನು ಸ್ಪಷ್ಟಪಡಿಸುತ್ತಾರೆ. ಭಗವಂತ ನಮಗೆ ಒಲಿಯಬೇಕಾದರೆ ಅವನ ಭಕ್ತರ ಸಂಗ ಅತೀ ಅವಶ್ಯ. ಶ್ರೀಮದ್ಭಾಗವತದಲ್ಲಿ 'ಭಗವದ್ಭಕ್ತರ ಸಂಗ' ಅವಶ್ಯ ಏಕೆ? ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

## ಸತಾಂ ಪ್ರಸಂಗಾನ್ಮಮ ವೀರ್ಯಸಂಪದೋ
## ಭವಂತಿ ಹೃತ್ಕರ್ಣರಸಾಯನಾಃ ಕಥಾಃ ।
## ತಜ್ಜೋಷಣಾದಾಶ್ವಪವರ್ಗವರ್ತ್ಮನಿ
## ಶ್ರದ್ಧಾವತೀ ಭಕ್ತಿರನುಕ್ರಮಿಷ್ಯತಿ ॥ (೩–೨೬–೨೫)

ಸಜ್ಜನರ (ಭಗವದ್ಭಕ್ತರ) ಸಂಗದಿಂದ ಭಗವಂತನ ಪರಾಕ್ರಮ, ಮಹಿಮೆಯ ಕುರಿತಾದ, ಹೃದಯ ಮತ್ತು ಕಿವಿಗಳಿಗೆ ಸುಖಕರವಾದ ಹರಿಕಥೆಗಳು ಜರುಗುತ್ತವೆ. ಆ ಭಗವಂತನ ಕಥೆಗಳನ್ನು ಕೇಳುವುದರಿಂದ ಮೋಕ್ಷಪ್ರದವಾದ ಶ್ರೀಹರಿಯಲ್ಲಿ ಭಕ್ತಿಯು ಹುಟ್ಟುತ್ತದೆ. ನಂತರ,

## ಭಕ್ತ್ಯಾ ಪುಮಾನ್ ಜಾತವಿರಾಗ ಐಂದ್ರಿಯಾತ್

ದೃಷ್ಟಶ್ರುತಾತ್ಮದ್ರವಿಣಾನುಚಿಂತಯಾ ।
ಚಿತ್ತಸ್ಯ ಯತ್ತೋ ಗ್ರಹಣೇ ಯೋಗಯುಕ್ತೋ
ಯತಿಷ್ಯತೇ ಋಜುಭಿರ್ಯೋಗಮಾರ್ಗೈಃ (೩-೨೬-೨೬ )

ಭಕ್ತಿ ಬಂದ ಮೇಲೆ ಮನುಷ್ಯನು ವಿಷಯಪದಾರ್ಥಗಳು ಅಸಾರ, ಅನಿತ್ಯವೆಂದು ಕೇಳಿ ತಿಳಿದು, ಇಂದ್ರಿಯ ಭೋಗ್ಯ ವಿಷಯಗಳಲ್ಲಿ ವಿರಕ್ತಿ ಹೊಂದುತ್ತಾನೆ. ನಂತರ ಮನೋನಿಗ್ರಹದಲ್ಲಿ ಜಾಗರೂಕನಾಗಿ ಶ್ರವಣಾದಿ ಯೋಗಯುಕ್ತನಾಗಿ ಯಮ, ನಿಯಮಾದಿ ಯೋಗಮಾರ್ಗಗಳಿಗೆ ಭಗವಂತನ ಅಪರೋಕ್ಷಜ್ಞಾನಕ್ಕೆ ಪ್ರಯತ್ನಿಸುತ್ತಾನೆ. ಬಳಿಕ,

ಅಸೇವಯಾಂ ಪ್ರಕೃತೇರ್ಗುಣಾನಾಂ
ಜ್ಞಾನೇನ ವೈರಾಗ್ಯ ವಿಜೃಂಭಿತೇನ ।
ಯೋಗೇನ ಮಯ್ಯರ್ಪಿತಯಾ ಚ ಭಕ್ತ್ಯಾ
ಮಾಂ ಪ್ರತ್ಯಗಾತ್ಮಾನಮಿಹಾವರುಂಧೇ ॥ (೩-೨೬-೨೭)

ಪ್ರಕೃತಿಯ ಗುಣಕಾರ್ಯಗಳಾದ ವಿಷಯಗಳನ್ನು ಸೇವಿಸದಿರುವುದರಿಂದ, ವೈರಾಗ್ಯದಿಂದ, ಅಭಿವೃದ್ಧಿಯಿಂದ, ಜ್ಞಾನದಿಂದ, ಭಗವಂತನಲ್ಲಿ ಇಟ್ಟಿರುವ ನೆಟ್ಟಭಕ್ತಿಯಿಂದ ತನ್ನ ಶರೀರದಲ್ಲಿದ್ದ ಬಿಂಬಮೂರ್ತಿಯಾದ ಭಗವಂತನನ್ನು ನೋಡುತ್ತಾನೆ. ಅಂದರೆ ಭಗವಂತನು ಭಕ್ತಿಗೆ ಒಲ್ಲಿದು ಅವನಿಗೆ ತನ್ನ ದರ್ಶನವನ್ನೀಯುತ್ತಾನೆ.
ಹೀಗೆ ಭಗವಂತನ ಭಕ್ತರ ಸಂಗ ಪರಂಪರಯಾ ಭಗವದ್ದರ್ಶನಕ್ಕೆ ಕಾರಣವಾಗುತ್ತದೆ. ಇದನ್ನೇ ಶ್ರೀದಾಸರು "ರಂಗನೊಲಿಯನೋ ಭಕ್ತರ ಸಂಗ ದೊರೆಯದೇ" ಎಂದು ಹೇಳಿರುವುದು ಸಾರ್ಥಕವಾಗಿದೆ.

## ಮಂದಮತಿಗಳು ಇವರ ಚಂದವರಿಯದೇ
## ನಿಂದಿಸುವರು ಭವದ ಬಂಧ ತಪ್ಪದೂ ॥

ಬುದ್ಧಿವಂತರಲ್ಲದ ಮೂಢಜನರು ಶ್ರೀವಿಜಯರಾಯರ ಮಹಿಮೆಯನ್ನು ಅರಿಯದೇ ಅವರನ್ನು ನಿಂದಿಸುತ್ತಾರೆ. ಮಹಾತ್ಮರಾದ ಇವರನ್ನು ನಿಂದಿಸುವುದರಿಂದ ಅಂತಹ ಜನರಿಗೆ ಸಂಸಾರ ಬಂಧನವು ತಪ್ಪುವುದೇ ಇಲ್ಲ. ಸಂಸಾರದಲ್ಲಿ ಕಷ್ಟಪಡುತ್ತಾ ತಿರುಗುತ್ತಾರೆ.

ಮಹಾತ್ಮರ ನಿಂದೆ ಮಹಾ ಅನರ್ಥಕ್ಕೆ ಕಾರಣವಾಗುತ್ತದೆ. ಅಷ್ಟೇ ಅಲ್ಲ, ಅದರಿಂದ ಸಂಸಾರದಲ್ಲಿಯೇ ಕೊಳೆಯಬೇಕಾಗುತ್ತದೆ ಎಂಬ ಮಾತನ್ನು ಇಲ್ಲಿ ವ್ಯಾಸವಿಠಲರು ಸ್ಪಷ್ಟಪಡಿಸುತ್ತಾರೆ. ಸ್ತೋತ್ರಮರಾದ ಮಹಾತ್ಮರ ನಿಂದೆಯು ಅತಿಘಾತುಕವಾಗಿದೆ. ಕುಲನಾಶನವಾಗಿದೆ. ಭಗವಂತನು ಉಳಿದೆಲ್ಲ ತಪ್ಪುಗಳನ್ನು ಮನ್ನಿಸುತ್ತಾನೆ. ಆದರೆ, ಮಹಾತ್ಮರ ನಿಂದೆಯನ್ನು ಎಂದಿಗೂ ಸಹಿಸುವುದಿಲ್ಲ.

ಉದಾ: ದಕ್ಷಪ್ರಜಾಪತಿಯು ವಿದ್ಯೆ, ತಪಸ್ಸು ಮುಂತಾದ ಅನೇಕ ಒಳ್ಳೆಯ ಗುಣಗಳಿಂದ ಯುಕ್ತನಾಗಿದ್ದರೂ ಸಹ, ತನಗಿಂತ ಉತ್ತಮನಾದ ರುದ್ರದೇವರ ನಿಂದೆಯನ್ನು ಮಾಡಿ ಪ್ರಾಣ ಕಳೆದುಕೊಳ್ಳಬೇಕಾಯಿತು (ಭಾಗವತ ಚತುರ್ಥ ಸ್ಕಂದ).
ಸ್ವೋತ್ತಮರಾದ ವಾಯುದೇವರನ್ನು ನಿಂದಿಸಿದ ಶೇಷದೇವರು ಗಿರಿಯ ರೂಪದಲ್ಲಿ ವಾಸಿಸಬೇಕಾಯಿತು(ವೆಂ.ಮ.)
ಜಡಭರತನಿಗೆ ಮೇಣೆಯನ್ನು ಹೊರಿಸಿದ ರಹೂಗಣರಾಜನು ಮೊದಲು ಅವನನ್ನು ಹೀಯಾಳಿಸಿ, ನಿಂದಿಸಿ ಮಾತನಾಡುತ್ತಾನೆ. ನಂತರ ಜಡಭರತನು ತಕ್ಕ ಉತ್ತರವನ್ನು ಕೊಡಲಾಗಿ ರಾಜನು ಮೇಣೆಯಿಂದ ಕೆಳಗಿಳಿದು ಜಡಭರತನ ಪಾದಗಳಿಗೆ ನಮಸ್ಕರಿಸಿ, ಕ್ಷಮೆ ಬೇಡಿ, ಹೀಗೆ ಹೇಳುತ್ತಾನೆ–

ನಾಹಂ ವಿಶಂಕೇ ಸುರರಾಜ ವಜ್ರಾತ್

ನತ್ರ್ಯಕ್ಷ್ಯ ಶೂಲಾತ್ ನಯಮಸ್ಯ ದಂಡಾತ್ ।

ನಾಗ್ನ್ಯರ್ಕಸೋಮಾನಿಲವಿತ್ತಪಾಸ್ತ್ರಾತ್

ಶಂಕೇ ಭೃಶಂ ಬ್ರಹ್ಮಕುಲಾವಮಾನಾತ್ ॥ಶ್ರೀಮದ್ಭಾಗವತ ೫–೧೦–೧೮)

ನಾನು ದೇವತೆಗಳ ರಾಜನಾದ ಇಂದ್ರನ ವಜ್ರಾಯುಧಕ್ಕೆ, ಮುಕ್ಕಣ್ಣನ ತ್ರಿಶೂಲಕ್ಕೆ, ಯಮನ ದಂಡಕ್ಕೆ, ಅಗ್ನಿ–ಸೂರ್ಯ–ಚಂದ್ರ–ಕುಬೇರರ ಅಸ್ತ್ರಕ್ಕೆ ಅಂಜುವುದಿಲ್ಲ. ಆದರೆ ಬ್ರಾಹ್ಮಣರ ಅವಮಾನಕ್ಕಾಗಿ ಬಹಳ ಭಯಪಡುತ್ತೇನೆ.
ಮಹನ್ನಿಂದಾವರ್ಜನ ಪ್ರಕರಣದಲ್ಲಿ ಶ್ರೀವಿಷ್ಣುತೀರ್ಥಶ್ರೀಪಾದಂಗಳವರು ಇದನ್ನು ಸ್ಪಷ್ಟಪಡಿಸಿದ್ದಾರೆ. ಕಾರಣ, ವಿಜಯದಾಸರಂತಹ ಮಹಾತ್ಮರ ನಿಂದೆ ಸರ್ವಥಾ ಕೂಡದು.ಯಾರಾದರೂ ಮಾಡಿದ್ದಾದರೆ ಅವರು ಈ ಸಂಸಾರದಲ್ಲಿ ಬಿದ್ದು ಕಷ್ಟಪಡಬೇಕಾಗುತ್ತದೆ. ಭವದ ಬಂಧ ಹೋಗುವುದೇ ಇಲ್ಲ ಎಂಬುದಾಗಿ ಶ್ರೀವ್ಯಾಸವಿಠಲರು ತಿಳಿಸಿದ ಮಾತುಗಮನಾರ್ಹವಾಗಿದೆ.

ಇಂದಿರಾಪತಿ ಇವರ ಮುಂದೆ ಕುಣಿವನೋ

ಅಂದ ವಚನವಾ ನಿಜಕೆ ತಂದುಕೊಡುವನೋ ॥

ಶ್ರೀವಿಜಯದಾಸರು ಮಹಾಭಗವದ್ಭಕ್ತರು. ಇಂದಿರಾಪತಿಯಾದ ಶ್ರೀಹರಿಯು ಇವರು ಗಾನ ಮಾಡಿದರೆ ಸಾಕು, ಅವರ ಮುಂದೆ ಕುಣಿಯುತ್ತಾನೆ ಮತ್ತು ಅವರ ಬಾಯಿಂದ ಬಂದ ಮಾತು ಸತ್ಯವೇ ಆಗುತ್ತದೆ, ಸಂಶಯವಿಲ್ಲವೆನ್ನುತ್ತಾರೆ ಶ್ರೀವ್ಯಾಸವಿಠ್ಠಲರು.

ಶ್ರೀಜಗನ್ನಾಥದಾಸರು ಶ್ರೀಹರಿಕಥಾಮೃತಸಾರದಲ್ಲಿ –

ಮಲಗಿ ಪರಮಾದರದಿ ಪಾಡಲು

ಕುಳಿತು ಕೇಳುವ ಕುಳಿತು ಪಾಡಲು

ನಿಲುವ ನಂತರೆ ನಲಿವ ನಲಿದರೆ ಒಲಿವ ನಿಮಗೆಂಬ।

ಸುಲಭನೋ ಹರಿ ತನ್ನವರನರೆ

ಗಳಿಗೆ ಬಿಟ್ಟಗಲನು ರಮಾಧವ

ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ (೨–೫)

ಎಂದು ತಿಳಿಸಿದಂತೆ ಮಹಾಭಗವದ್ಭಕ್ತರಾದ ಶ್ರೀವಿಜಯದಾಸರು ಗಾನ ಮಾಡಿದರೆ ಅವರ ಮುಂದೆ ಕುಣಿಯುವವನು ಶ್ರೀಹರಿ, ಇದರಲ್ಲಿ ಆಶ್ಚರ್ಯವೇನಿಲ್ಲ.

ಭಕ್ತವತ್ಸಲ ಶ್ರೀಹರಿ "ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋನಧಾವತಿ" ಎಂಬ ಉಕ್ತಿಯಂತೆ ಭೃಗುಋಷಿಗಳ ಅವತಾರರಾದ ಶ್ರೀವಿಜಯದಾಸರು ನೀಡಿದ ವಚನವನ್ನು ಶ್ರೀಹರಿಯು ಸತ್ಯವನ್ನಾಗಿ ಮಾಡುತ್ತಾನೆ. ಶ್ರೀವಿಜಯದಾಸರ ಚರಿತ್ರೆಯಲ್ಲಿ ಇಂತಹ ಒಂದು ಪ್ರಸಂಗವನ್ನು ನಾವು ಕಾಣಬಹುದು.

ಒಮ್ಮೆ ಶ್ರೀವಿಜಯದಾಸರಿಗೆ ಮೂರನೆಯ ಸಲ ಕಾಶೀಯಾತ್ರೆಯನ್ನು ಮಾಡಬೇಕೆಂದೆನಿಸಿತು. ಶಿಷ್ಯ ಪರಿವಾರದವರು ಹೊರಟರು. ಶ್ರೀ ಮೋಹನದಾಸರಿಗೆ ಪ್ರಯಾಣ ಮಾಡಲು ಅಪ್ಪಣೆಯಾಗಲಿಲ್ಲ. ಶ್ರೀವಿಜಯದಾಸರು ಹೊರಡುವಾಗ ಶ್ರೀಮೋಹನದಾಸರ ಹೆಂಡತಿಯನ್ನು ಕರೆದು – "ಮೋಹನನಿಗೆ ಅಪಮೃತ್ಯು ಬರುವುದು. ಮೃತನಾದನೆಂದು ಅವನ ದೇಹವನ್ನು ಸಂಸ್ಕಾರಕ್ಕೆ ಕೊಡಬೇಡ, ಮತ್ತೆ ಬದುಕುತ್ತಾನೆ" ಎಂದು ಹೇಳಿ ಹೊರಟರು.

ಶ್ರೀವಿಜಯದಾಸರು ಪ್ರಯಾಣ ಬೆಳೆಸಿದ ಮೇಲೆ ಶ್ರೀಮೋಹನದಾಸರು ಆನೆಗೊಂದಿಗೆ ಬಂದರು. ಕೆಲವು ಕಾಲಾನಂತರ ಶ್ರೀಮೋಹನದಾಸರಿಗೆ ದೇಹಾಲಸ್ಯವಾಯಿತು. ನಾಲ್ಕಾರು ದಿನ ಜ್ವರ ಬಂದು ಅವರು ಮೃತರಾದವರಂತೆ ಕಂಡು ಬಂದರು. ದೇಹವನ್ನು ಸಂಸ್ಕಾರ ಮಡಬೇಕೆಂದು ಬಂದ ಜನರಿಗೆ ಅವರ ಪತ್ನಿ ಅವಕಾಶ ಕೊಡಲಿಲ್ಲ. ಶ್ರೀವಿಜಯದಾಸರನ್ನು ಸ್ಮರಿಸುತ್ತಾ ಕುಳಿತಳು. ಜನರೂ ಕೂಡ ದಾಸರಿಂದ ಅಭಯಪ್ರಧಾನವಾಗಿರುವ ಸಂಗತಿ ತಿಳಿದು ಆಕೆಯೊಡನೆ ಉಪವಾಸ ಕುಳಿತರು.

ಅತ್ತ ಶ್ರೀಮೋಹನದಾಸರ ಜೀವಾತ್ಮನನ್ನು ಕೊಂಡೊಯ್ದು ಯಮದೂತರು ಧರ್ಮರಾಜನ ಬಳಿ ನಿಲ್ಲಿಸಿದರು. ಯಮಧರ್ಮನು ಇವನ ಧರ್ಮಾಧರ್ಮಗಳೇನೆಂದು ವಿಚಾರಿಸಿದನು. ಶ್ರೀವಿಜಯದಾಸರಂಥಾ ಅಪರೋಕ್ಷಜ್ಞಾನಿಗಳ ಶಿಷ್ಯನು ತಾನೆಂಬ ಗರ್ವವೊಂದನ್ನು ಬಿಟ್ಟರೆ ಮತ್ತಾವ ಅಪರಾಧವೂ ಇಲ್ಲ ಎಂಬುದಾಗಿ ಚಿತ್ರಗುಪ್ತರು ತಿಳಿಸಿದರು.

ಆಗ ಯಮಧರ್ಮನು ತಿಳಿದು ಮಾಡಿದ ತಪ್ಪಿಗೆ ಶಿಕ್ಷೆಯಾಗಬೇಕು. ಇವನು ದಂಡಾರ್ಹನು ಎಂದನು. ಆಗ ಶ್ರೀಮೋಹನದಾಸರು– "ವಿಜಯರಾಯ! ನಿಮ್ಮನ್ನು ನಂಬಿದ ನನಗೆ ಈ ದಂಡನೆಯೇ?" ಎಂಬುದಾಗಿ ಮೊರೆಯಿಟ್ಟರು.

ಆ ಕಾಲಕ್ಕೆ ಸರಿಯಾಗಿ ವಿಜಯದಾಸರು ನಿಜರೂಪದಿಂದ (ಭೃಗುಋಷಿ) ಯಮಧರ್ಮರಾಜನ ಸಭೆಗೆ ಬಂದು "ನಿರಪರಾಧಿಯನ್ನು ದಂಡನೆಗೇಕೆ ಗುರಿ ಮಾಡಿದೆ?" ಎಂದು ಕೇಳಿದರು. ಯಮಧರ್ಮನು ಹಾಗೇನೂ ನಡೆದಿಲ್ಲವಲ್ಲ ಎನ್ನಲು "ನೋಡು! ಈ ಮೋಹನನು ನಮ್ಮ ಶಿಷ್ಯನು. ಈತನ ಭೂಲೋಕದ ವಾಸದ ಅವಧಿ ಮುಗಿದಿಲ್ಲ. ಯಾರನ್ನೋ ಕರೆತರುವುದಕ್ಕೆ ಬದಲಾಗಿ ನಿನ್ನ ದೂತರು ಈತನನ್ನು ಕರೆತಂದಿರುವರು. ಈತನನ್ನು ಬಿಟ್ಟುಬಿಡು" ಎಂದರು. ವಿಚಾರಮಾಡಿ ನೋಡಲಾಗಿ (ಋಷಿಗಳ) ವಿಜಯದಾಸರವಾಕ್ಯಸತ್ಯವಾಯಿತು.

ಇತ್ತ ಆನೆಗೊಂದಿಯಲ್ಲಿ ಶ್ರೀಮೋಹನದಾಸರ ಶರೀರವನ್ನು ಸಂಸ್ಕಾರ ಮಾಡಲು ಒತ್ತಾಯಿಸುತ್ತಿದ್ದರು. ಅಷ್ಟರಲ್ಲಿ ಅಧಿಕಪ್ರಸಂಗಿಯೊಬ್ಬನು "ಈ ಹೆಂಗಸನ್ನು ಕೇಳುವುದೇನು? ಎಲ್ಲವನ್ನು ಸಿದ್ಧಮಾಡಿದ್ದೇನೆ. ನಾವೇ ಹೆಣವನ್ನು ಸಾಗಿಸೋಣ" ಎನ್ನುತ್ತ ಮುಂದೆ ಬಂದನು. ಶ್ರೀಮೋಹನದಾಸರ ಪತ್ನಿ ಬೇಡವೆಂದು ಗೋಳಾಡಿದಳು. ಅಷ್ಟರಲ್ಲಿ ಶ್ರೀಮೋಹನದಾಸರ ಆತ್ಮವು ಆ ಶರೀರದಲ್ಲಿ ಪ್ರವೇಶಿಸಿತು. "ನನಗೆ ಸಿದ್ಧಮಡುವೆಯಾ? ನಡೆ ನಿನಗೆಲ್ಲ ಸಿದ್ಧವಾಗಿದೆ" ಎಂದು ನುಡಿಯುತ್ತಾ ಶ್ರೀ ಮೋಹನದಾಸರು ಎದ್ದು ಕುಳಿತರು. ಉದ್ಧಟವಾದ ಅವನು ಅವಸರದಿಂದ ನಡೆಯಲು ಗಿಡ್ಡಾಗಿದ್ದ ಕಲ್ಲುಬಾಗಿಲು ವಾಡವು ಅವನತಲೆಗೆ ಬಡಿದು ನೆಲಕ್ಕೆ ಬಿದ್ದು ಮೃತನಾದನು.

ಶ್ರೀಮೋಹನದಾಸರು ಅಲ್ಲಿ ನೆರೆದ ಜನರ ಗದ್ದಲ ಮುಂತಾದ ವಿಷಯ ಕುರಿತು ಪತ್ನಿಯನ್ನು ವಿಚಾರಿಸಲು ನಡೆದ ವೃತ್ತಾಂತ ಅರುಹಿ, ಶ್ರೀವಿಜಯದಾಸರು ಅಭಯಕೊಟ್ಟವಚನದ ಕುರಿತು ತಿಳಿಸಿದಳು. ಎಲ್ಲರೂ ಸಂತೋಷಪಟ್ಟರು.

ಶ್ರೀವಿಜಯದಾಸರು ಆಡಿದ ವಚನವನ್ನು ಶ್ರೀಹರಿಯು ನಿಜವನ್ನಾಗಿ ಮಾಡಿ, ಅವರ ಶಿಷ್ಯರಾದ ಶ್ರೀಮೋಹನದಾಸರನ್ನು ಬದುಕಿಸಿದ ವಿಷಯ ನೋಡಿದಾಗ ಶ್ರೀವ್ಯಾಸವಿಠಲರ ಮಾತು ಸತ್ಯವೆಂಬುದು ಮನವರಿಕೆಯಾಗುತ್ತದೆ.

ಹೀಗೆ ಅಪರೋಕ್ಷಜ್ಞಾನಿಗಳಾದ ಶ್ರೀವಿಜಯದಾಸರ ಸ್ತೋತ್ರರೂಪವಾದ 'ವಿಜಯಕವಚ'ವು ಎಲ್ಲ ಭಕ್ತವರ್ಗಕ್ಕೆ ನಿಜವಾಗಿಯೂ 'ಕವಚ'ದಂತೆ ರಕ್ಷಣೆ ನೀಡುವುದರಲ್ಲಿ ಸಂದೇಹವಿಲ್ಲ.

Contributed by Vidhya Vishnu Kiran Bangalore
Courtesy :vijayasampada